ಓ.ಎಸ್. ನಂಬರಃ 6/2021

ಪಿ. ಡಬ್ಲ್ಯೂ.1

**(ಇಂದು ದಿಃ 10.11.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಎಸ್ ಬಿ ಬಿ ವಕೀಲರಿಂದ,**

ನಿಪಿ –16 ನೀವು ಖರೀದಿಸಿದ ನಂತರ ಅರ್ಜಿ ಸಲ್ಲಿಸಿ ಆದಂತಹ ಆದೇಶವಾಗಿರುತ್ತದೆಯೋ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಸದ್ರಿ ಆದೇಶವು ನಮ್ಮ ಸಂಸ್ಥೆ ಖರೀದಿಸುವ ಪೂರ್ವದಲ್ಲಿಯೇ ಆಗಿರುತ್ತದೆ ಎನ್ನುತ್ತಾರೆ. ನಮ್ಮ ಸಂಸ್ಥೆಯವರು ಸದ್ರಿ ಕಟ್ಟಡವನ್ನು ಖರೀದಿಸುವ 10 ವರ್ಷದ ಪೂರ್ವದಲ್ಲಿ ಸದ್ರಿ ಕಟ್ಟಡವನ್ನು ಕಟ್ಟಲಾಗಿತ್ತು. ನಿಪಿ–17 ಸರ್ವೇ ಇಲಾಖೆಯ ನಕಾಶೆಯ ಆಧಾರದ ಮೇಲೆ ಮಾಡಲಾಗಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ.

ನಿಪಿ–19 ರಲ್ಲಿ ಕಾಣುತ್ತಿರುವ ಕಟ್ಟಡವು ಮುರ್ಡೇಶ್ವರ–ಕೈಕಿಣಿ ರಸ್ತೆಗೆ ಹೊಂದಿಕೊಂಡಿರುವ ಕಟ್ಟಡವಾಗಿರುತ್ತದೆ. ಸದ್ರಿ ಕಟ್ಟಡದ ನೆಲ ಅಂತಿಸ್ತಿನಲ್ಲಿ ಪ್ರತಿವಾದಿ ಹಾಗೂ ಕಮಲಾ ಕೋಂ. ಗಜಾನನ ನಾಯ್ಕ ಮತ್ತು ಮೇನಕಾ ಶಿವಕುಮಾರ ಮುರ್ಡೇಶ್ವರ ಎನ್ನುವವರ ಅಂಗಡಿಗಳು ಇರುತ್ತವೆ ಎಂದರೆ ಸರಿ. 2 ನೇ ಮಹಡಿಯಲ್ಲಿ ಈಗ ಮುರ್ಡೇಶ್ವರ ಅತಿಥಿ ಲಾಜಿಂಗ್ ಮತ್ತು ಬೊರ್ಡಿಂಗ ಎಂದು ಒಂದು ವಸತಿ ಗೃಹ ಇರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದ್ರಿ ಲಾಡ್ಜನ್ನು ಕಳೆದ ಆರು ತಿಂಗಳಿನಿಂದ ನಡೆಸಿಕೊಂಡು ಹೋಗುತ್ತಿದ್ದಾರೆ. ನಿಪಿ–19 ರಲ್ಲಿ ಕಾಣುತ್ತಿರುವ ಕಟ್ಟಡದಲ್ಲಿ ಇರುವ ಬಾಡಿಗೆದಾರರ ಬಗ್ಗೆ ನಮ್ಮ ಸಂಸ್ಥೆಯ ಕಂಪ್ಯೂಟರನಲ್ಲಿ ಮಾಹಿತಿ ಇರುತ್ತದೆ. ಬಾಡಿಗೆದಾರರಿಗೆ ಸಂಬಂಧಪಟ್ಟು ನಮ್ಮ ಸಂಸ್ಥೆಯಲ್ಲಿ ಪ್ರತ್ಯೇಕ ಖಾತಾ ರಜಿಸ್ಟರ ಇರುವುದಿಲ್ಲ.

ನಮ್ಮ ವಾರ್ಷಿಕ ವರದಿಯಲ್ಲಿ ನಿಪಿ–19 ರಲ್ಲಿ ಕಾಣುತ್ತಿರುವ ಕಟ್ಟಡದಿಂದ ಎಷ್ಟು ಆದಾಯ ಬಂದಿರುತ್ತದೆ ಎಂಬುದರ ಬಗ್ಗೆ ನಮೂದು ಆಗಿರುತ್ತದೆ. 2022–23 ರ ನಮ್ಮ ಸಂಸ್ಥೆಯ ವಾರ್ಷಿಕ ವರದಿಯನ್ನು ನಾನು ನೋಡಿರುತ್ತೇನೆ. 2021–22, 2022–23 ವರ್ಷದ ವಾರ್ಷಿಕ ವರದಿಯನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ.

ನಿಪಿ–20 ಸದ್ರಿ ಕಟ್ಟಡದ ಹಿಂದಿನ ಮಾಲೀಕರು ಮಾಡಿಸಿದಂತಹ ದಾಖಲಾತಿಯಾಗಿರುತ್ತದೆ. ನಿಪಿ–20 ನ್ನು ಅವರು ಮಾಡಿಸುವಾಗ ಏನೇನು ದಾಖಲಾತಿಗಳನ್ನು ಕೊಟ್ಟಿದ್ದಾರೆ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ಸರ್ವೇ ನಂಬರ 7ಬ ಮತ್ತು ಸರ್ವೇ ನಂಬರ 7ಅ/14 ಈ ಹಿಂದೆ ಒಬ್ಬನೇ ಮಾಲೀಕನಿಗೆ ಸೇರಿದ ಸ್ವತ್ತುಗಳಾಗಿದ್ದವು. ನಮ್ಮ ಸಂಸ್ಥೆಯವರು ಖರೀದಿಸಿದ್ದು ಸರ್ವೇ ನಂಬರ 7ಅ/14 ರಲ್ಲಿ ಇರುವ ಆಸ್ತಿಯನ್ನು. ನಮಗೆ ಸರ್ವೇ ನಂಬರ 7ಬ ದಲ್ಲಿ ಯಾವುದೇ ಹಕ್ಕು ಇರುವುದಿಲ್ಲ. ನಿಪಿ–19 ರಲ್ಲಿ ಕಾಣುತ್ತಿರುವ ಕಟ್ಟಡವು ಸರ್ವೇ ನಂಬರ 7ಬ ರಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂಬರ 7ಬ ದಲ್ಲಿರುವ ಕಟ್ಟಡವನ್ನು ತಪ್ಪು ಮಾಹಿತಿ ಕೊಟ್ಟು ಸರ್ವೇ ನಂಬರ 7ಅ/14 ರಲ್ಲಿ ಇರುವಂತೆ ತೋರಿಸಿ ನೋಂದಾವಣಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಸರ್ವೇ ನಂಬರ 7ಬ ರಲ್ಲಿರುವ ಕಟ್ಟಡವು ಮುರ್ಡೇಶ್ವರ ಕೈಕಿಣಿ ರೆಸ್ತೆಗೆ ಹೊಂದಿರುತ್ತದೆ ಮತ್ತು ನೀವು ಖರೀದಿಸುವ ಜಾಗವು ಸರ್ವೇ ನಂಬರ 7ಅ/14 ರಲ್ಲಿ ಇದ್ದು ಅದು ಸರ್ವೇ ನಂಬರ 7ಬ ರ ಹಿಂಬದಿಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ನೀವು ಹೇಳುವಂತ ಕಟ್ಟಡವು ಸರ್ವೇ ನಂಬರ 7ಅ/14 ಇರುವುದಿಲ್ಲ ಎಂದರೆ ಸರಿಯಲ್ಲ. ಸದ್ರಿ ಕಟ್ಟಡದಲ್ಲಿ ಇರುವ ಬಾಡಿಗೆದಾರರು ಈಗಲೂ ಕೂಡಾ ಸದ್ರಿ ಕಟ್ಟಡದ ಮೂಲ ಮಾಲೀಕರೊಡನೆ ಬಾಡಿಗೆದಾರರಾಗಿ ಉಳಿದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ–16 ರಿಂದ ನಿಪಿ–21 ವಸ್ತುಸ್ಥಿತಿಗೆ ವಿರುದ್ಧವಾಗಿ ಮತ್ತು ಸರ್ವೇ ಇಲಾಖೆಯ ದಾಖಲಾತಿಗಳಿಗೆ ವಿರುದ್ಧವಾಗಿ ನೀವು ಸೃಷ್ಠಿಸಿಕೊಂಡಂತಹ ಖೊಟ್ಟಿ ದಾಖಲಾತಿಗಳಾಗಿರುತ್ತವೆ ಎಂದರೆ ಸರಿಯಲ್ಲ.

ನೀವು ಪ್ರತಿವಾದಿಗಳಿಗೆ ತಪ್ಪು ಮಾಹಿತಿಯನ್ನು ಕೊಟ್ಟು ಸರ್ವೇ ನಂಬರ 7ಬ ರಲ್ಲಿ ಇರುವ ಆಸ್ತಿಯನ್ನು ಖರೀದಿಸಿರುತ್ತೀರಿ ಅಂತಾ ಹೇಳಿ ಅವರಿಂದ ಠೇವಣಿಯನ್ನು ಪಡೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನಿಮಗೆ ಮತ್ತು ಪ್ರತಿವಾದಿಯ ನಡುವೆ ಯಾವತ್ತೂ ಕೂಡಾ ಬಾಡಿಗೆದಾರ ಮತ್ತು ಮಾಲೀಕನ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ 7ಬ ರಲ್ಲಿರುವ ಕಟ್ಟಡವನ್ನು ಬೇಕಾಯ್ದೆಶೀರ್ ವಾಗಿ ಸರ್ವೇ ನಂಬರ 7ಅ/14 ರಲ್ಲಿ ಇದೆ ಅಂತಾ ಹೇಳಿ ಪ್ರತಿವಾದಿಗಳಿಗೆ ಮೋಸ ಮಾಡಿರುತ್ತೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ, ಭಟ್ಕಳ**